ವ್ಯಾಪಾರಕ್ಕಾಗಿ, ಉದ್ದಿಮೆಗಾಗಿ ಈ ಪ್ರಾಧಿಕಾರ ಬೇರೆಬೇರೆ ವಲಯಗಳನ್ನು ಏರ್ಪಡಿಸಿರುವುದರಿಂದ ವಲಯ ಬದಲಾವಣೆಗೆ ಸುಲಭವಾಗಿ ಮಂಜೂರಾತಿ ಸಿಗುವುದಿಲ್ಲ. ಈ ಮೂರು ಅರ್ಜಿಗಳನ್ನು ಆಗತ್ಯವುಳ್ಳ ದಾಖಲೆಗಳೊಂದಿಗೆ ಸಲಾಯಿಸಿದರೂ ಅನುಮತಿ ಸುಲಭದಲ್ಲಿ ಸಿಗಲಾರದು. ಈ ವಿಶಿಷ್ಟ ಉದ್ದೇಶಕ್ಕಾಗಿಯೇ ಇದ್ದೇವೆಂಬ ಸೋಗಿ ಹಾಕಿ ಜನರನ್ನು ಘೋಷಿಸುತ್ತಿರುವ ಪುಧ್ಯವರ್ತಿಗಳು ಮಧ್ಯ ಪ್ರವೇಶಿಸಿದಲ್ಲಿ ಅವರ ಮೂಲಕ ಬೇಕಾದಂತೆ ಅನುಮತಿ ದೊರಕುತ್ತದೆ. ನಿಯಮಾವಳಿಗಳನ್ನು ಸಡಿಲಿಸಿ ಸಹ ಮಾನವೀಯ ದೃಷ್ಟಿಯಿಂದೆಂಬಂತೆ ಮಂಜೂರಾತಿ ಸಿಗುತ್ತದೆ. ಇಲ್ಲವಾದಲ್ಲಿ ಕೊಟ್ಟ ಅರ್ಜಿಗಳು ಪಡೆದ ಕಛೇರಿಯಲ್ಲಿ ಕೊಳೆಯುತ್ತ ಬಿದ್ದಿರುತ್ತವೆ ಎಂಬುದು ಈ ಪ್ರಾಧಿಕಾರ ಕ್ಷೇತ್ರದಲ್ಲಿ ಜನ ಹೇಳುವ ಮಾತಾಗಿದೆ. ಈ ಪ್ರಾಧಿಕಾರ ಕ್ಷೇತ್ರದ ಬಹಳಷ್ಟು ಅಭಿವೃದ್ಧಿ ಹೊಂದಿದ ಪ್ರದೇಶವಾಗಿದ್ದು ಅಲ್ಲಿ ಕೆಲವೇ ಸೆಂಟ್ಸ್ ಜಾಗ ಇದ್ದವರು ಸಹ ತಮಗೆ ಬೇಕಾದ ಉದ್ದೇಶದ ಬಗ್ಗೆ ಕಟ್ಟಡ ಕಟ್ಟಿಸುವಂತಿಲ್ಲ ಅಥವಾ ತನ್ನ ಜಾಗವನ್ನು ಬೇಕಾದ ಉದ್ದೇಶಕ್ಕಾಗಿ ಬಳಕೆ ಮಾಡುವಂತಿಲ್ಲ. ಇದು ಘಟನಾತ್ಮಕವಾಗಿ ಬಂದ ನಾಗರೀಕ ಹಕ್ಕಿನ ಮೇಲೆ ಮಾಡುವ ಅನಾವಶ್ಯಕ ಪಸ್ತಕ್ಷೇಪವಾಗಿದೆ. ಆದರೆ ಅಡ್ಡಹಾದಿ ಹಿಡಿದಲ್ಲಿ ಯಾವ ನಿಯಮಾವಳಿಯನ್ನು ಉಲ್ಲಂಘಿಸಿ ಬೇಕಾದವರಿಗೆ ಬೇಕಾದಂತೆ ಮಂಜೂರಾತಿ ಸಿಕ್ಕಿದ ನಿದರ್ಶನವೂ ಇದೆ. ಯೋಜನೆಗೆ ಪ್ರಾಧಿಕಾರದಲ್ಲಂತೂ ಪೂಜಾರಿಗಳ ಮೂಲಕ ಸಂದರ್ಶನ ದೊರಕದಿದ್ದಲ್ಲಿ ಗುಡಿಯಲ್ಲಿರುವ ದೇವರುಗಳು ಸುಪ್ರೀತವಾಗುವುದಿಲ್ಲ ಹಾಗೂ ಅನುಗ್ರಹ ಲಭ್ಯವಾಗುವುದಿಲ್ಲ ಎಂಬ ದೂರು ಎಲ್ಲೆಡೆ ಕೇಳಿಬರುತ್ತಿದೆ. ಕೆಲವೊಮ್ಮೆ ಪ್ರಾಧಿಕಾರದ ಅನುಮತಿ ಸಿಕ್ಕಿ ರವಿನ್ಯೂ ಇಲಾಖೆಯಿಂದ ತಿರಸ್ಕೃತವಾಗಿ ಅಥವಾ ರವಿನ್ಯೂ ಇಲಾಖೆಯಿಂದ ಅನುಮತಿ ಸಿಕ್ಕಿ ಪ್ರಾಧಿಕಾರದಿಂದ ಅನುಮತಿ ದೊರಕದ ಉದಾಹರಣೆಗಳೂ ಇವೆ.

ಈ ಸಲುವಾಗಿ ಎಲ್ಲಾ ಲೋಪದೋಷಗಳನ್ನು ಸರಿಪಡಿಸಬೇಕು. ಜನ ಸಾಮಾನ್ಯರಿಗೆ ತೊಂದರೆಯಾಗದಂತೆ ಎಲ್ಲಾ ಅನುಮತಿಗಳನ್ನು ನೀಡಬೇಕು. ಅರ್ಜಿ ಹಾಕುವ ವಿಧಾನ ಸರಳಗೊಳಿಸಬೇಕು. ಮಧ್ಯವರ್ತಿಗಳ ಹಾವಳಿ ತಪ್ಪಿಸಬೇಕು. ಅಧಿಕಾರಿಗಳಿರುವುದು ಜನರಿಗಾಗಿ, ಪ್ರಾಧಿಕಾರ ಯೋಜನೆ ಶಾಪವಲ್ಲ ಎಂಬ ಭಾವನೆ ಬೆಳೆಯುವಂತೆ ಕಾರ್ಯ ನಿರ್ವಹಣೆ ಆಗಬೇಕು. ಈ ದಿಸೆಯಲ್ಲಿ ಸರ್ಕಾರ ಬೇಗನೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಈ ಸಮಸ್ಯೆ ಇದೆ. ನಾನು ಇದನ್ನು ಗಮನಿಸಿದ್ದೇನೆ. ಸದಸ್ಯರಿಯವರು ಹೇಳಿದ ಹಾಗೆ ಇದನ್ನು ಪರಿಹಾರ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೆಂದು ಯೋಚಿಸುತ್ತಿದ್ದೇನೆ, ಬೇಗ ಇದರ ಬಗ್ಗೆ ಪರಿಹಾರ ಕ್ರಮ ಹುಡುಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

X ಗುಲ್ಬರ್ಗ ನಗರದಲ್ಲಿರುವ ಆಶೀರ್ವಾದ ಎಂಟರ್‌ಪ್ರೈಸಸ್ ಮಾಲಿಕರ ಮೇಲೆ ರಸೇದ ಎಂಬುವವರು ಗಲಾಟೆ ಮಾಡಿರುವುದು

ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).—ಗುಲ್ಬರ್ಗ ನಗರದಲ್ಲಿ ಎಂ. ಎಸ್. ಕೆ. ಮಿಲ್ ರಸ್ತೆಯಲ್ಲಿರುವ ಆಶೀರ್ವಾದ ಎಂಟರ್‌ಪ್ರೈಸಸ್ ಅಂಗಡಿಗೆ ಹೋಗಿ ಅಂಗಡಿಯ ಮಾಲೀಕರಾದ ಕುಮಾರಿ ಮಹಾದೇವಿ ಎಂಬುವರ ಮೇಲೆ ರಸೇದ ಎಂಬ ವ್ಯಕ್ತಿ ೨೧-೧-೧೯೮೬ರಂದು ಗಲಾಟೆ ಮಾಡಿದ್ದಾನೆ. ಹಾಗೂ ಅವನ ಸಂಗಡ ಎರಡು ಜನ ಪೋಲೀಸ್ ಪೇದೆಗಳು ಅವನನ್ನು ಬೆಂಬಲಿಸುತ್ತಿದ್ದರು. ರಸೇದ ಹಾಗೂ ೨ ಜನ ಪೋಲೀಸ್ ಪೇದೆಗಳು ಜಾಮೀನು ಕೊಡಲು ಹೆದರಿಸುತ್ತಿದ್ದರು ಹಾಗೂ ಅಂಗಡಿಯಲ್ಲಿರುವ ಸಾಮಾನುಗಳನ್ನು ಸಿಕ್ಕಾಪಟ್ಟೆ ಚೆಲ್ಲಾಪಿಲ್ಲಿ ಮಾಡಿರುವರು. ರಸೇದನ ಸಂಗಡವಿರುವ ಪೋಲೀಸ್ ಪೇದೆಗಳ ಹೆಸರು ರಾಮಚಂದ್ರ ಮತ್ತು ಮಹದೇವ. ಹಾಗಾದರೆ ಈ ಗಲಾಟೆ ನಡೆಯಲು ಕಾರಣವೇನು ? ರಸೇದ ಎಂಬುವವನು ಯಾರು ? ಅವನ ಹಿಂಬಾಲಕರಾದ ಪೇದೆಗಳಾದ ರಾಮಚಂದ್ರ ಮತ್ತು ಮಹಾದೇವ ರಸೇದನನ್ನು ಬೆಂಬಲಿಸಲು ಕಾರಣವೇನು ? ಮಾನ್ಯ ಗೃಹ ಮಂತ್ರಿಗಳು ಅವರ ವಿರುದ್ಧ ಯಾವ ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಸದನಕ್ಕೆ ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇದು ಕಾನೂನು ಪರಿಪಾಲನೆ ಬಗ್ಗೆ ಇದೆ. ಪೋಲೀಸ್ ಕಾನ್‌ಸ್ಟೇಬಲ್ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಆ ಕಂಪ್ಲೇಂಟ್ ನನಗೆ ಕೊಟ್ಟರೆ ನಾನು ಗೃಹಮಂತ್ರಿಯವರಿಂದ ಅದರ ಬಗ್ಗೆ ವಿಚಾರಿಸುತ್ತೇನೆ.